ಇಸ್ಲಾಮ್ ಅಪರಿಚಿತ ಸ್ಥಿತಿಯಲ್ಲಿ ಪ್ರಾರಂಭವಾಯಿತು, ಮತ್ತು ಅದು ಪ್ರಾರಂಭವಾದಂತೆಯೇ ಮತ್ತೆ ಅಪರಿಚಿತ ಸ್ಥಿತಿಗೆ ಮರಳುತ್ತದೆ. ಆದ್ದರಿಂದ, ಆ ಅಪರಿಚಿತರಿಗೆ ಮಂಗಳವಾಗಲಿ

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು:
ಅಲ್ಲಾಹುವಿನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಇಸ್ಲಾಮ್ ಅಪರಿಚಿತ ಸ್ಥಿತಿಯಲ್ಲಿ ಪ್ರಾರಂಭವಾಯಿತು, ಮತ್ತು ಅದು ಪ್ರಾರಂಭವಾದಂತೆಯೇ ಮತ್ತೆ ಅಪರಿಚಿತ ಸ್ಥಿತಿಗೆ ಮರಳುತ್ತದೆ. ಆದ್ದರಿಂದ, ಆ ಅಪರಿಚಿತರಿಗೆ ಮಂಗಳವಾಗಲಿ."
[صحيح] [رواه مسلم]

ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ತಿಳಿಸುವುದೇನೆಂದರೆ, ಇಸ್ಲಾಮ್ ಕೆಲವೇ ಕೆಲವು ವ್ಯಕ್ತಿಗಳು ಮತ್ತು ಕಡಿಮೆ ಅನುಯಾಯಿಗಳಿರುವ ಸ್ಥಿತಿಯಲ್ಲಿ ಅಪರಿಚಿತವಾಗಿ ಪ್ರಾರಂಭವಾಯಿತು. ಅದು ಪ್ರಾರಂಭವಾದಂತೆಯೇ, ಅದನ್ನು ಜೀವನದಲ್ಲಿ ಅಳವಡಿಸುವವರ ಕೊರತೆಯಿಂದಾಗಿ ಮತ್ತೆ ಅದು ಅಪರಿಚಿತ ಸ್ಥಿತಿಗೆ ಮರಳುತ್ತದೆ. ಆದ್ದರಿಂದ, ಆ ಅಪರಿಚಿತರಿಗೆ ಸಂತೋಷ, ಸುಖ, ಹರ್ಷ ಮತ್ತು ಕಣ್ಣಿಗೆ ತಂಪು (ಖುರ್ರತು ಐನ್) ಇರಲಿ.

http://sunnah.global/hadeeth/kn/show/66219